KABR420010472016

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದೊಡ್ಡಬಳ್ಳಾಪುರ**

**:ಉಪಸ್ಥಿತರು:**

**ಶ್ರೀಮತಿ ಪ್ರೀತಿ.ಕೆ., ಎಲ್.ಎಲ್.ಎಂ.,**

ಅಪರ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ದೊಡ್ಡಬಳ್ಳಾಪುರ

**ದಿನಾಂಕ 27 ನೇ ಮಾರ್ಚ್, 2026**

**ಸಿ.ಸಿ.418/2016**

**ಪಿರ್ಯಾದಿ : ದೊಡ್ಡಬೆಳವಂಗಲ ಪೋಲೀಸ್ ಠಾಣೆ**

**(ಸಹಾಯಕ ಸರ್ಕಾರಿ ಅಭಿಯೋಜಕರು)**

**// ವಿರುದ್ಧ //**

**ಆರೋಪಿತರು:** 1. **ಶ್ರೀ. ಕೆಂಪೇಗೌಡ**

ಬಿನ್ ದೊಡ್ಡಏರಡಿಯಪ್ಪ

ವಯಸ್ಸು 43 ವರ್ಷಗಳು,

ವಾಸಃ ಗುಮ್ಮನಹಳ್ಳಿ

ಸಾಸಲು ಹೋಬಳಿ,

ದೊಡ್ಡಬಳ್ಳಾಪುರ ತಾಲ್ಲೂಕು,

ಬೆಂಗಳೂರು ಗ್ರಾಮಾಂತರ ಜಿಲ್ಲೆ.

**2. ಶ್ರೀ. ಪುಟ್ಟಯ್ಯ**

ಬಿನ್ ನರಸೇಗೌಡ

ವಯಸ್ಸು 53 ವರ್ಷಗಳು

ವಾಸಃ ಸಾಸಲು ಗ್ರಾಮ

ಸಾಸಲು ಹೋಬಳಿ,

ದೊಡ್ಡಬಳ್ಳಾಪುರ ತಾಲ್ಲೂಕು,

ಬೆಂಗಳೂರು ಗ್ರಾಮಾಂತರ ಜಿಲ್ಲೆ.

**3. ಶ್ರೀ. ಗಂಗರಾಜು**
ಬಿನ್ ನರಸೇಗೌಡ
ವಯಸ್ಸು 40 ವರ್ಷಗಳು
ವಾಸಃ ಸಾಸಲು ಗ್ರಾಮ
ಸಾಸಲು ಹೋಬಳಿ,
ದೊಡ್ಡಬಳ್ಳಾಪುರ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

**4. ಆದಿನಾರಾಯಣ**
ಬಿನ್ ನರಸೇಗೌಡ
ವಯಸ್ಸು 37 ವರ್ಷಗಳು
ವಾಸಃ ಸಾಸಲು ಗ್ರಾಮ
ಸಾಸಲು ಹೋಬಳಿ,
ದೊಡ್ಡಬಳ್ಳಾಪುರ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

**(ಶ್ರೀ . ಆರ್, ಎಂ., ವಕೀಲರು)**

**:ತೀರ್ಪು:**

ದೊಡ್ಡಬೆಳವಂಗಲ ಪೋಲೀಸ್ ಠಾಣಾ ಆರಕ್ಷಕ ಉಪ ನಿರೀಕ್ಷಕರು ಆರೋಪಿತರ ವಿರುದ್ಧ ಭಾ.ದಂ.ಸಂ.ಕಲಂ: 323, 447 ಮತ್ತು 504 ಸಹಕಲಂಃ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆ ಪ್ರಕರಣದ ಸಾರಾಂಶ ಈ ಕೆಳಗಿನಂತೆ ಇರುತ್ತದೆ.**

ದಿನಾಂಕ:05.10.2014 ರಂದು ಮಧ್ಯಾಹ್ನ 12-00ರ ಸಮಯದಲ್ಲಿ ದೊಡ್ಡಬೆಳವಂಗಲ ಪೊಲೀಸ್ ಠಾಣಾ ಸರಹದ್ದು, ಗುಮ್ಮನಹಳ್ಳಿ ಗ್ರಾಮದಲ್ಲಿ ಚಾಸಾ-1 ಮತ್ತು 2 ರವರು ಸರ್ವೇ ನಂ. 7/1ಬಿ ರ 18 ಗುಂಟೆ ಜಮೀನಿನಲ್ಲಿ ಟ್ರಾಕ್ಟರ್ ನಲ್ಲಿ ಉಳುಮೆ

ಮಾಡಿಸುತ್ತಿದ್ದಾಗ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ-1 ಮತ್ತು 2 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ಈ ಜಮೀನು ತಮಗೆ ಸೇರಿದ್ದು, ಯಾವನೋ ಉಳುಮೆ ಮಾಡಿಸುತ್ತಿರೋದು ಎಂದು ಅವಾಚ್ಯ ಶಬ್ಧಗಳಿಂದ ಬೈದು, ಚಾಸಾ-1 ಮತ್ತು 2 ರವರಿಗೆ ಕೈಗಳಿಂದ ಹೊಡೆದು ತಳ್ಳಾಡಿರುತ್ತಾರೆಂದು, ಆ ಮೂಲಕ ಆರೋಪಿತರ ವಿರುದ್ಧ ಮೇಲ್ಕಂಡ ಶಿಕ್ಷಾರ್ಹ ಅಪರಾಧ ಮಾಡಿರುವುದಾಗಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲಾಗಿದೆ.

3. ಈ ಪ್ರಕರಣದಲ್ಲಿ ಪೋಲಿಸರು ಪ್ರಥಮ ವರ್ತಮಾನ ಹೇಳಿಕೆ (ದೂರನ್ನು) ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ:233/2014 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ತನಿಖೆಯ ನಂತರ ಆರೋಪಿತರ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ.

4. ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯ ಆಪಾದಿಸಿದ ಅಪರಾಧಗಳಿಗೆ ಸಂಜ್ಞೇಯ ತೆಗೆದುಕೊಂಡು, ಆರೋಪಿತರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಿ ಸಮನ್ಸ್ ಹೊರಡಿಸಿರುತ್ತದೆ. ಆರೋಪಿತರು ಸಮನ್ಸ್ ಸ್ವೀಕಾರ ಮಾಡಿ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ.

5. ದಂ.ಪ್ರ.ಸಂ.ಕಲಂ 207 ರಡಿಯಲ್ಲಿ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ಆರೋಪಿತರಿಗೆ ನೀಡಿ, ದೋಷಾರೋಪಣೆಯನ್ನು ರಚಿಸಿ ತಿಳಿಯುವಂತೆ ಓದಿ ಹೇಳಿದಾಗ

ಆರೋಪಿತರು ತಾವು ಯಾವುದೇ ತಪ್ಪು ಮಾಡಿಲ್ಲ ವಿಚಾರಣೆ ಆಗಬೇಕೆಂದು ಕೇಳಿಕೊಂಡಿರುತ್ತಾರೆ.

6. ಅಭಿಯೋಜನೆ ಪರ ಎರಡು ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿ ನಿಪಿ-1 ರಿಂದ ನಿಪಿ-3 ದಾಖಲೆಗಳನ್ನು ಗುರುತಿಸಿಕೊಳ್ಳಲಾಗಿರುತ್ತದೆ. ಆರೋಪಿತರ ವಿರುದ್ಧ ಆರೋಪಗಳಿಗೆ ಸಂಬಂಧಿಸಿದ ಸಾಕ್ಷ್ಯಾಧಾರಗಳು ಲಭ್ಯವಿರದ ಕಾರಣ ದಂ.ಪ್ರ.ಸಂ.ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಕೈ ಬಿಡಲಾಗಿರುತ್ತದೆ. ಆರೋಪಿತರು ತಮ್ಮ ಪರ ಯಾವುದೇ ಸಾಕ್ಷಿಯನ್ನು ವಿಚಾರಣೆಗೆ ಒಳಪಡಿಸಿಕೊಂಡಿಲ್ಲ ಮತ್ತು ದಾಖಲೆಗಳನ್ನು ಗುರುತಿಸಿ ಕೊಂಡಿರುವುದಿಲ್ಲ.

7. ಅಭಿಯೋಜನೆ ಪರ ಹಾಗೂ ಆರೋಪಿತರ ಪರ ವಕೀಲರ ವಾದ ಕೇಳಲಾಯಿತು ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದ ನ್ಯಾಯಾಲಯದ ಸಮ್ಮುಖದಲ್ಲಿರುವ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು.

**8. ಮೇಲ್ಕಂಡ ಸಂಗತಿಗಳಿಂದ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.**

***ಅಂಶ-1:***- ದಿನಾಂಕ:05.10.2014 ರಂದು ಮಧ್ಯಾಹ್ನ 12-00 ರ ಸಮಯದಲ್ಲಿ ದೊಡ್ಡಬೆಳವಂಗಲ ಪೊಲೀಸ್ ಠಾಣಾ ಸರಹದ್ದು, ಗುಮ್ಮನಹಳ್ಳಿ ಗ್ರಾಮದಲ್ಲಿ ಚಾಸಾ-1 ಮತ್ತು 2 ರವರು ಸರ್ವೇ ನಂ. 7/1 ಬಿ ರ 18 ಗುಂಟೆ ಜಮೀನಿನಲ್ಲಿ ಟ್ರಾಕ್ಟರ್ ನಲ್ಲಿ ಉಳುಮೆ ಮಾಡಿಸುತ್ತಿದ್ದಾಗ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ-1 ಮತ್ತು 2 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ಈ ಜಮೀನು ತಮಗೆ ಸೇರಿದ್ದು, ಯಾವನೋ ಉಳುಮೆ ಮಾಡಿಸುತ್ತಿರೋದು ಎಂದು ಅವಾಚ್ಯ ಶಬ್ಧಗಳಿಂದ ಬೈದು, ಚಾಸಾ-1 ಮತ್ತು 2 ರವರಿಗೆ ಕೈಗಳಿಂದ ಹೊಡೆದು ತಳ್ಳಾಡಿರುತ್ತಾರೆಂದು, ಆ ಮೂಲಕ ಭಾ.ದಂ.ಸಂ.ಕಲಂ 323, 447 ಮತ್ತು 504 ಸಹಕಲಂ: 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ

ಎಸಗಿರುತ್ತಾರೆಂಬುದನ್ನು ಅಭಿಯೋಜನೆ ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತದೆಯೇ ?

***ಅಂಶ-2*** *ಏನು ಆದೇಶ ?*

9. **ಈ ಮೇಲ್ಕಂಡ ಅಂಶಗಳನ್ನು ಈ ಕೆಳಕಂಡಂತೆ ಉತ್ತರಿಸಲಾಗಿದೆ.**

***ಅಂಶ :1 : ನಕಾರಾತ್ಮಕವಾಗಿ***

***ಅಂಶ :2 : ಅಂತಿಮ ಆದೇಶದಂತೆ***

## :ಕಾರಣಗಳು:

10.**ಅಂಶ-1:** ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ರುಜುವಾತು ಪಡಿಸಲು ಅಭಿಯೋಜನೆಯು ಪ್ರಾಸಾ-1 ಮತ್ತು ಪ್ರಾಸಾ-2 ರವರನ್ನು ವಿಚಾರಣೆಗೆ ಒಳಪಡಿಸಿ ಕೊಂಡಿದ್ದು, ನಿಪಿ:1 ರಿಂದ ನಿಪಿ:3 ದಾಖಲೆಗಳನ್ನು ಗುರುತಿಸಿಕೊಂಡಿರುತ್ತದೆ. ನಿಪಿ:1:ದೂರು, ನಿಪಿ :2: ಪಂಚನಾಮೆ ಹಾಗೂ ನಿಪಿ-3 ಪ್ರಾಸಾ-2 ರವರ ಹೇಳಿಕೆಯಾಗಿರುತ್ತದೆ.

11. ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ-1 ಈ ಪ್ರಕರಣದ ಪಿರ್ಯಾದಿ ಹಾಗೂ ನೊಂದ ವ್ಯಕ್ತಿಯಾಗಿದ್ದು ತಮ್ಮ ಸಾಕ್ಷ್ಯದಲ್ಲಿ ದೂರನ್ನು ನಿಪಿ-1 ಮತ್ತು ಪಂಚನಾಮೆಯನ್ನು ನಿಪಿ-2 ಎಂದು ಗುರುತಿಸಿ, ಆರೋಪಿತರು ಮತ್ತು ತಮ್ಮ ನಡುವೆ ಜಮೀನಿನ ವಿಚಾರವಾಗಿ ಮಾತಿನ ಚಕಮಕಿಯಾಗಿದ್ದು, ಆಗ ತಾನು ಸಿಟ್ಟಾಗಿ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ನಿಪಿ-1 ಮತ್ತು 2 ಕ್ಕೆ ತನ್ನ ಸಹಿಯನ್ನು ಪಡೆದಿರುತ್ತಾರೆಂದು, ನಿಪಿ-1 ಮತ್ತು 2 ರಲ್ಲಿನ ವಿಚಾರ ತನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಆರೋಪಿತರು ತಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೈಗಳಿಂದ ಹೊಡೆದು ತಳ್ಳಾಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸರ್ಕಾರಿ ಸಹಾಯಕ ಅಭಿಯೋಜಕರು ಪ್ರಾಸಾ-1 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ನ್ಯಾಯಾಲಯದ ಅನುಮತಿ

ಪಡೆದು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಿ ನೀಡಿದಂತಹ ಎಲ್ಲ ಸಲಹೆಗಳನ್ನು ಸಾಕ್ಷಿ ನಿರಾಕರಿಸಿ ಅಲ್ಲಗಳೆದಿರುತ್ತಾರೆ ಮತ್ತು ರಾಜೀ ಆಗಿರುವುದಾಗಿ ನುಡಿದಿರುತ್ತಾರೆ.

12. ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಿದ ಪ್ರಾಸಾ-2 ಇವರು ಪ್ರತ್ಯಕ್ಷ/ ನೊಂದ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ತಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿಲ್ಲ, ತನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೈಗಳಿಂದ ಹೊಡೆದು ತಳ್ಳಾಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸರ್ಕಾರಿ ಸಹಾಯಕ ಅಭಿಯೋಜಕರು ಪ್ರಾಸಾ-2 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ನ್ಯಾಯಾಲಯದ ಅನುಮತಿ ಪಡೆದು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಿ ನೀಡಿದಂತಹ ಎಲ್ಲ ಸಲಹೆಗಳನ್ನು ಸಾಕ್ಷಿ ನಿರಾಕರಿಸಿ ಅಲ್ಲಗಳೆದಿರುತ್ತಾರೆ ಮತ್ತು ರಾಜೀ ಆಗಿರುವುದಾಗಿ ನುಡಿದಿರುತ್ತಾರೆ.

13. ಮುಂದುವರೆದು, ಈ ಪ್ರಕರಣವನ್ನು ಆರೋಪಿತರು ಭಾ.ದಂ.ಸಂ. ಕಲಂ: 323, 447 ಮತ್ತು 504 ಸಹಕಲಂ: 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ದಾಖಲಿಸಿದ್ದು, ಅಭಿಯೋಜನೆಯು ಆರೋಪಿತರ ವಿರುದ್ಧದ ಆರೋಪವನ್ನು ಸ್ಥಾಪಿಸಲು ಪ್ರಾಸಾ-1 ನ್ನು ವಿಚಾರಣೆಗೆ ಒಳಪಡಿಸಿರುತ್ತದೆ. ಪ್ರಾ.ಸಾ-1 ರವರು ಈ ಪ್ರಕರಣದ ಪಿರ್ಯಾದಿ ಮತ್ತು ನೊಂದವರಾಗಿದ್ದು, ಪ್ರಾಸಾ-2 ರವರು ಪ್ರತ್ಯಕ್ಷ್ಯ ಹಾಗೂ ನೊಂದ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ನಿಪಿ-1 ರಲ್ಲಿನ ಯಾವ ಅಂಶವನ್ನು ಪ್ರಾಸಾ-1 ರವರು ನುಡಿದಿರುವುದಿಲ್ಲ. ಬದಲಿಗೆ ಆರೋಪಿತರು ಮತ್ತು ತನ್ನ ನಡುವೆ ಜಮೀನಿನ ವಿಚಾರಕ್ಕಾಗಿ ಮಾತಿನ ಚಕಮಕಿಯಾಗಿದ್ದು, ಆಗ ತಾನು ಸಿಟ್ಟಾಗಿ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ನಿಪಿ-1 ಮತ್ತು ನಿಪಿ-2 ಕ್ಕೆ ತಮ್ಮ ಸಹಿ ಪಡೆದಿರುತ್ತಾರೆ ಹಾಗೂ ಅದರಲ್ಲಿನ ವಿಚಾರ ತಮಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಅದೇ

ರೀತಿ ಪ್ರಾಸಾ-2 ರವರು ಕೂಡ ತಮಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಈ ಪ್ರಕರಣದ ಪ್ರಮುಖ ಸಾಕ್ಷಿಗಳ ಪ್ರತಿಕೂಲತೆ ಅಭಿಯೋಜನೆಗೆ ಆರೋಪಿತರ ಮೇಲೆ ಮಾಡಲಾಗಿರುವ ಆರೋಪಗಳನ್ನು ರುಜುವಾತುಪಡಿಸಲು ಸಾಧ್ಯವಾಗಿರುವುದಿಲ್ಲ. ಆರೋಪಿತರ ವಿರುದ್ಧ ಆಪಾದಿಸಿರುವ ಆರೋಪಗಳನ್ನು ಸಾಬೀತು ಪಡಿಸಲು ಯಾವುದೇ ಬಲವಾದ ಸಾಕ್ಷ್ಯ ಈ ನ್ಯಾಯಾಲಯದ ಮುಂದೆ ಇರುವುದಿಲ್ಲ. **ಆದ್ದರಿಂದ ಅಂಶ-1 ನ್ನು ನಕಾರಾತ್ಮಕ ಎಂದು ಉತ್ತರಿಸಲಾಗಿದೆ.**

**14. ಅಂಶ-2:** ಮೇಲೆ ಚರ್ಚಿಸಿರುವ ಅಂಶಗಳಿಗಾಗಿ ಈ ಕೆಳಗಿನಂತೆ,

**ಆದೇಶ**

ದಂ.ಪ್ರ.ಸಂ.ಕಲಂ 248(1) ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಆರೋಪಿತರ ವಿರುದ್ಧ ಮಾಡಲಾದ ಭಾ.ದಂ.ಸಂ.ಕಲಂ 323, 447 ಮತ್ತು 504 ಸಹಕಲಂಃ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ನಿರ್ದೋಶಿಗಳು ಎಂದು ಖುಲಾಸೆಗೊಳಿಸಲಾಗಿದೆ.

ಆರೋಪಿತರು ಹಾಗೂ ಅವರುಗಳ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಪತ್ರಗಳನ್ನು ಅಪೀಲು ಅವಧಿಯ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.

(ಉಕ್ತಲೇಖನವನ್ನು ಗಣಕಯಂತ್ರದ ಮೂಲಕ ನೇರವಾಗಿ ಶೀಘ್ರಲಿಪಿಗಾರರಿಗೆ ನೀಡಿ, ಅವರು ಬೆರಳಚ್ಚು ಮಾಡಿದ ನಂತರ, ತಪ್ಪುಗಳನ್ನು ತಿದ್ದಿ, ಸರಿಪಡಿಸಿ ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ದಿಃ 27 ನೇ ಮಾರ್ಚ್, 2026 ರಂದು ಘೋಷಿಸಲಾಗಿದೆ)

**Sd/-**
**(ಪ್ರೀತಿ.ಕೆ)**
ಅಪರ ಸಿವಿಲ್ ನ್ಯಾಯಾಧೀಶರು &
ಜೆ.ಎಂ.ಎಫ್.ಸಿ., ದೊಡ್ಡಬಳ್ಳಾಪುರ

**:ಅನುಬಂಧ:**

**1. ಅಭಿಯೋಜನೆ ಪರ ಸಾಕ್ಷಿಗಳ ಪಟ್ಟಿ:**

ಪ್ರಾಸಾ :1 : ಜಿ.ವಿ ರಾಮಕೃಷ್ಣಪ್ಪ

ಪ್ರಾಸಾ :2 : ಶ್ರೀನಿವಾಸ್

**2. ಅಭಿಯೋಜನೆ ಪರ ದಾಖಲೆಗಳ ಪಟ್ಟಿ:**

ನಿಪಿ :1 : ದೂರು

ನಿಪಿ :2 : ಪಂಚನಾಮೆ

ನಿಪಿ :3 : ಪ್ರಾಸಾ-2 ರವರ ಹೇಳಿಕೆ

**3. ಅಭಿಯೋಜನೆ ಪರ ಮುದ್ದೆ ಮಾಲುಗಳ ಪಟ್ಟಿ:**

-ಇಲ್ಲಾ-

**4. ಆರೋಪಿಗಳ ಪರ ಸಾಕ್ಷಿಗಳ ಪಟ್ಟಿ:**

-ಇಲ್ಲಾ-

**5. ಆರೋಪಿಗಳ ಪರ ದಾಖಲೆಗಳ ಪಟ್ಟಿ:**

-ಇಲ್ಲಾ-

**Sd/-**
**(ಪ್ರೀತಿ.ಕೆ)**
ಅಪರ ಸಿವಿಲ್ ನ್ಯಾಯಾಧೀಶರು &
ಜೆ.ಎಂ.ಎಫ್.ಸಿ., ದೊಡ್ಡಬಳ್ಳಾಪುರ